**ಸಾಕ್ಷಿಯನ್ನು ದಿನಾಂಕಃ 24-07-2024 ರಂದು ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ.1 ರವರ ಪರ ಶ್ರೀ.ಎ.ಕೆ.ಓ ವಕೀಲರಿಂದಃ**

ನಾನು ಮೇಟಗುಡ್ಡ ಗ್ರಾಮದ ಖಾಯಂ ನಿವಾಸಿಯಾಗಿರುತ್ತೇನೆ. ನನಗೆ ದಾವಾ ಆಸ್ತಿಗಳ ಸರ್ವೆ ನಂಬರ ಹೇಳಲು ಬರುತ್ತದೆ. ಸದರಿ ದಾವಾ ಆಸ್ತಿಗಳು ಮೇಟಗುಡ್ಡ ಮತ್ತು ಜಾಲಿಬೇರಿ ಗ್ರಾಮದಲ್ಲಿರುತ್ತವೆ. ನಮ್ಮ ಮನೆತನದ ಮೂಲ ಪುರುಷ ತಿಮ್ಮಪ್ಪ ಖಿಲಾರಿ ಎಂದರೆ ಸರಿ. ತಿಮ್ಮಪ್ಪ ಇವನಿಗೆ ಜಟ್ಟೆಪ್ಪ, ಶಾಶಪ್ಪ ಮತ್ತು ಸತ್ಯಪ್ಪ ಅಂತಾ ಮೂರು ಜನ ಮಕ್ಕಳು ಇದ್ದರು. ಸದರಿ ಸತ್ಯಪ್ಪ ಇವರು ನನ್ನ ತಂದೆಯಾಗಬೇಕು. ಜಟ್ಟೆಪ್ಪ ಇವನಿಗೆ ತಿಮ್ಮಪ್ಪ, ದುಂಡಪ್ಪ ಮತ್ತು ವೆಂಕಪ್ಪ ಎಂಬ ಮೂರು ಜನ ಮಕ್ಕಳು ಇರುತ್ತಾರೆ. ಶಾಸಪ್ಪನಿಗೆ ಸತ್ಯಪ್ಪ ಎಂಬ ಒಬ್ಬನೆ ಮಗ ಇರುತ್ತಾನೆ.

ದಾವಾ ಆಸ್ತಿಗಳು ಮೊದಲು ಮೂಲ ಪುರುಷನಾದ ತಿಮ್ಮಪ್ಪ ಇವರ ಹೆಸರಿನಲ್ಲಿದ್ದವು ಎಂದರೆ ಸರಿ. ಮೇಟಗುಡ್ಡ ಗ್ರಾಮದ ದಾವಾ ಆಸ್ತಿಗಳಾದ ರಿ ಸ ನಂ.188/2 ಬಿ ಮತ್ತು 187/ಆರ್ ಸಿ ಇವುಗಳಿಗೆ

ಸಂಬಂದಿಸಿದಂತೆ ತಿಮ್ಮಪ್ಪನ ಮಕ್ಕಳ ನಡುವೆ 1957 ನೇ ಸಾಲಿನಲ್ಲಿ ವಾಟ್ನಿ ಆಗಿರುತ್ತವೆ ಎಂದರೆ ಸರಿ. ಸದರಿ ವಾಟ್ನಿ ಪ್ರಕಾರ ಡೈರಿ ನಂ.299 ಮಂಜೂರಾಗಿ ಸದರಿ ವಾಟ್ನಿ ಪ್ರಕಾರ ಅವರ ಹೆಸರುಗಳು ಅವರವರ ಪಾಲಿಗೆ ಬಂದ ಜಮೀನುಗಳಿಗೆ ದಾಖಲಾಗಿರುತ್ತವೆ ಎಂದರೆ ಸರಿ. ಸದರಿ 1957 ರ ವಾಟ್ನಿಯಲ್ಲಿ ನನ್ನ ತಂದೆ ಸತ್ಯಪ್ಪ ಇವರ ಪಾಲಿಗೆ ರಿ.ಸ.ನಂ 187/6/1 ವಿಸ್ತೀರ್ಣ 04 ಎಕರೆ 30 ಗುಂಟೆ ಬಂದಿರುತ್ತದೆ ಎಂದರೆ ಸಾಕ್ಷಿಯ 05 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ಪ್ರತಿವಾದಿ ನಂ1 ಮತ್ತು 2 ರವರ ತಂದೆ ಜಟ್ಟೆಪ್ಪ ಇವರ ಪಾಲಿಗೆ 04 ಎಕರೆ 30 ಗುಂಟೆ ಬಂದಿರುತ್ತದೆ ಎಂದರೆ ಸಾಕ್ಷಿಯ 04 ಎಕರೆ 24 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಾಟ್ನಿಯಲ್ಲಿ ಮೃತ ಪ್ರತಿವಾದಿ ನಂ.3 ರವರ ತಂದೆ ಶಾಸಪ್ಪ ಇವರ ಪಾಲಿಗೆ 04 ಎಕರೆ 31 ಗುಂಟೆ ಜಮೀನು ಬಂದಿರುತ್ತದೆ ಎಂದರೆ 04 ಎಕರೆ 22 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ರಿ.ಸ.ನಂ.188/2 ಬಿ ಇದು ಮೂಲತಃ 25 ಗುಂಟೆ ಇರುತ್ತದೆ ಎಂದರೆ ಸಾಕ್ಷಿಯು 22 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ 1957 ರ ವಾಟ್ನಿಯಲ್ಲಿ ದಾವಾ ಆಸ್ತಿ ರಿ.ಸ ನಂ.188/2 ಬಿ ಯಲ್ಲಿ ನಮ್ಮ ತಂದೆ ಸತ್ಯಪ್ಪ ಇವರಿ ಪಾಲಿಗೆ 08 ಗುಂಟೆ ಮತ್ತು ಜಟ್ಟೆಪ್ಪ ಇವರ ಪಾಲಿಗೆ 08 ಗುಂಟೆ ಮತ್ತು ಶಾಸಪ್ಪ ಇವರ ಪಾಲಿಗೆ 09 ಗುಂಟೆ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ಜಟ್ಟೆಪ್ಪ ಮತ್ತು ಶಾಸಪ್ಪ ಇವರು ನನ್ನ ತಂದೆಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1957 ರಲ್ಲಿ ಆದ ವಾಟ್ನಿ ಪ್ರಕಾರ ಎಲ್ಲರೂ ತಮ್ಮ ತಮ್ಮ ವಾಟ್ನಿಗೆ ಬಂದ ಹಿಸ್ಸೆಯಲ್ಲಿ ಕಬ್ಜಾ ವಹಿವಾಟಿಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಹೊಲದಲ್ಲಿ ನಾವು ಇರುತ್ತೇವೆ ಅವರ ಹೊಲದಲ್ಲಿ ಅವರು ಇರುತ್ತಾರೆ ಎಂದು ನುಡಿಯುತ್ತಾರೆ.

1963 ನೇ ಸಾಲಿನಲ್ಲಿ ಜಾಲಿಬೇರಿ ಗ್ರಾಮದಲ್ಲಿರುವ ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ವಾಟ್ನಿಯು ನಮ್ಮ ತಂದೆ ಸತ್ಯಪ್ಪ, ಜಟ್ಟೆಪ್ಪ ಮತ್ತು ಶಾಸಪ್ಪ ಇವರ ನಡುವೆ ಆಗಿರುತ್ತದೆ ಎಂದರೆ ಸರಿ. ಸದರಿ ವಾಟ್ನಿ ಪ್ರಕಾರ ಡೈರಿ ನಂ. 562 ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ವಾಟ್ನಿಯಲ್ಲಿ ದಾವಾ ಆಸ್ತಿ ರಿ.ಸ 161/3 ವಿಸ್ತೀರ್ಣ 05 ಎಕರೆ 13 ಗುಂಟೆ ನಮ್ಮ ತಂದೆ ಪಾಲಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು 05 ಎಕರೆ 34 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ಸದರಿ ದಾವಾ ಆಸ್ತಿಯಲ್ಲಿ ಜಟ್ಟೆಪ್ಪ ಮತ್ತು ಶಾಸಪ್ಪ ಇವರ ಪಾಲಿಗೆ ತಲಾ 05 ಎಕರೆ 13 ಗುಂಟೆ ಬಂದಿರುತ್ತದೆ ಎಂದರೆ ಸಾಕ್ಷಿಯ ಒಬ್ಬರಿಗೆ 05 ಎಕರೆ 06 ಗುಂಟೆ ಹಾಗೂ ಇನ್ನೊಬ್ಬರಿಗೆ 05 ಎಕರೆ 05 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ 1963 ರ ವಾಟ್ನಿ ಕಾಗದವನ್ನು ನಾನು ನೋಡಿರುವುದಿಲ್ಲ. ನಾನು ಡೈರಿ ನಂ.562 ನ್ನು ಓದಿ ತಿಳಿದುಕೊಂಡಿರುವುದಿಲ್ಲ.

ದಾವಾ ಆಸ್ತಿಗಳಾದ ರಿ ಸ ನಂ.172/2 ಬಿ ಮತ್ತು 172/3/3 ಇವುಗಳಿಗೆ ಸಂಬಂದಿಸಿದಂತೆ ಆದ ವಾಟ್ನಿಯಲ್ಲಿ ನಮ್ಮ ತಂದೆಗೆ 04 ಎಕರೆ 13 ಗುಂಟೆ ಮತ್ತು ಜಟ್ಟೆಪ್ಪ ಮತ್ತು ಶಾಸಪ್ಪ ಇವರ ಪಾಲಿಗೆ ತಲಾ 04 ಎಕರೆ 13 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸದರಿ ವಾಟ್ನಿಗಳು ಆದ ಪ್ರಕಾರ ಜಾಲಿಬೇರಿ ಗ್ರಾಮದ ದಾವಾ ಆಸ್ತಿಗಳಲ್ಲಿ ನಮ್ಮ ನಮ್ಮ ಪಾಲಿಗೆ ಬಂದ ಜಮೀನುಗಳಲ್ಲಿ ಕಬ್ಜೆ ಮತ್ತು ವಹಿವಾಟಿಯಲ್ಲಿರುತ್ತೇವೆ ಎಂದರೆ ಸಾಕ್ಷಿಯು ನಮ್ಮ ಜಮೀನುಗಳಲ್ಲಿ ನಾವು ಮತ್ತು ಅವರ ಜಮೀನುಗಳಲ್ಲಿ ಅವರು ಇರುತ್ತಾರೆ ಎಂದು ನುಡಿಯುತ್ತಾರೆ.

ನಮ್ಮ ತಂದೆ ಸತ್ಯಪ್ಪ ಇವರು ಈಗ ಸುಮಾರು 40 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನಮ್ಮ ತಂದೆಗೆ ನಾನು ಮತ್ತು 04 ಜನ ಹೆಣ್ಣು ಮಕ್ಕಳು ಇರುತ್ತೇವೆ. 2012 ನೇ ಸಾಲಿನಲ್ಲಿ ಎಲ್ಲ ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಪೋಡಿ ಮಾಡಲು ನಾನು ತಹಶೀಲ್ದಾರ ಕಚೇರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ಪೋಡಿ ಅರ್ಜಿಯ ಪ್ರಕಾರ ದಾವಾ ಆಸ್ತಿ ನಂ.161/3 ಕ್ಕೆ ಸಂಬಂದಿಸಿದಂತೆ ಪೋಡಿ ಡೈರಿ ನಂ.ಟಿ-36/2012-13 ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ನಂ.1 ರವರ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ